

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಟೋಪಿ: ಹಾಕಿಕೊಳ್ಳಿ, ಆದರೆ ಹಾಕಬೇಡಿ!

ಆಬಾಲವೃದ್ಧರಿಗೆಲ್ಲ ಗೊತ್ತಿರುವ ಒಂದು ಕಥೆ. ಚಿಕ್ಕಂದಿನಲ್ಲಿ ಹಿಂದೀ ಕಲಿಯುವಾಗ ಓದಿದ ಟೋಪಿವ್ಯಾಪಾರಿಯ ಈ ಕತೆಯನ್ನು ಕೇಳಿ ಆನಂದಿಸದ ಮಕ್ಕಳಿಲ್ಲ. ಆದರೆ ಅದು ಹಳೆಯ ಕಾಲದ ಕೋತಿಗಳ ಕತೆ. ಹೊಸಪೀಳಿಗೆಯ ಕೋತಿಗಳ ಕತೆ ಈ ಮುಂದಿನಂತಿದೆ.

ಆ ಟೋಪಿ ವ್ಯಾಪಾರಿಯ ಮಗನೂ ಸಹ ತಂದೆಯ ಟೋಪಿ ವ್ಯಾಪಾರವನ್ನು ಮುಂದುವರಿಸಿ ತಂದೆಗಿಂತ ಹೆಚ್ಚಿನ ಸಂಪಾದನೆ ಮಾಡತೊಡಗಿದ. ವ್ಯಾಪಾರಕ್ಕೆಂದು ಅದೇ ಕಾಡಿನ ಮಾರ್ಗವಾಗಿ ಪೇಟೆಗೆ ಹೋಗುವಾಗ ಅವನಿಗೂ ತಂದೆಗೆ ಆದ ಅನುಭವವೇ ಉಂಟಾಯಿತು. ಮರದ ಕೆಳಗೆ ಮಲಗಿ ಮೇಲೆದ್ದಾಗ ಬುಟ್ಟಿಯಲ್ಲಿದ್ದ ಟೋಪಿಗಳೆಲ್ಲವೂ ಮರದ ಮೇಲಿದ್ದ ಮಂಗಗಳ ಕೈಯಲ್ಲಿದ್ದವು. ವ್ಯಾಪಾರಿಯ ಮಗನಿಗೆ ತಂದೆ ಹೇಳಿದ್ದು ನೆನಪಾಗಿ ನಗುಬಂತು. ತಡಮಾಡದೆ ಕೈಯೆತ್ತಿ ತನ್ನ ತಲೆಯ ಮೇಲಿದ್ದ ಟೋಪಿಯನ್ನು ನೆಲಕ್ಕೆ ಬಿಸಾಡಿದ. ಆದರೆ ಅವನ ನಿರೀಕ್ಷೆಯಂತೆ ಕೋತಿಗಳು ಟೋಪಿಗಳನ್ನು ಕೆಳಗೆ ಬಿಸಾಡಲಿಲ್ಲ. ಅದರ ಬದಲಾಗಿ ಕೋತಿಮರಿಯೊಂದು ನೆಲಕ್ಕೆ ಜಿಗಿದು ವ್ಯಾಪಾರಿಯು ಬಿಸಾಡಿದ ಅವನ ಟೋಪಿಯನ್ನೂ ಎಗರಿಸಿಕೊಂಡು ಮರದ ಮೇಲೆ ಚಂಗನೆ ಹಾರಿ ಹಲ್ಲುಕಿರಿಯಿತು! ಯುವ ವ್ಯಾಪಾರಿ ಬೇಸ್ತುಬಿದ್ದು ಬರಿಗೈಯಲ್ಲಿ ಮನೆಗೆ ಹಿಂದಿರುಗಬೇಕಾಯಿತು. ಇದು ಮನುಷ್ಯನಿಂದ ಮಂಗ ಕಲಿತ ಬುದ್ಧಿಯೋ, ಮಂಗನಿಂದ ಮನುಷ್ಯ ಕಲಿತ ಬುದ್ಧಿಯೋ ಸಮಾಜವಿಜ್ಞಾನಿಗಳು ಚಿಂತಿಸುವುದೊಳಿತು.

ಇದೇ ಫೆಬ್ರವರಿ 4 ರಂದು ಬೆಂಗಳೂರಿನಲ್ಲಿ ಆರಂಭವಾಗುವ 77 ನೇ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ನಿನ್ನೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ತಮಗೆ ತೊಡಿಸಿದ ಮೈಸೂರು ಪೇಟ ಸಡಿಲವಾಗಿದ್ದನ್ನು ಗಮನಿಸಿ ಹಾರಿಸಿದ ಹಾಸ್ಯ ಚಟಾಕಿ: "ನನಗೆ ಟೋಪಿ ಹಾಕಿಸಿಕೊಂಡು ಅಭ್ಯಾಸವಿದೆ. ಆದರೆ ಪೇಟ ಹಾಕಿಸ್ಕೊಂಡು ಅಭ್ಯಾಸವಿಲ್ಲ!" ಇದೇ ಲಹರಿಯಲ್ಲಿ ಅವರು ಹೆಚ್ಚು ಹೊತ್ತು ಮಾತನಾಡಿದ್ದರೆ ಶತಮಾನದ ಅಂಚಿನಲ್ಲಿರುವ ಅವರು ಟೋಪಿ ಹಾಕಿಸಿಕೊಂಡ ವಿವಿಧ ಸುದೀರ್ಘ ಅನುಭವಗಳನ್ನು ಖಂಡಿತಾ ಬಿಚ್ಚಿಡುತ್ತಿದ್ದರು!

ಡಾರ್ವಿನ್ನನ ಜೀವವಿಕಾಸ ಸಿದ್ಧಾಂತದ ಪ್ರಕಾರ ಮಂಗನಿಂದ ಮಾನವನಾದ. ಶರೀರದ ಅಂಗರಚನೆಯಲ್ಲಿ ಮಂಗನಿಗೂ ಮನುಷ್ಯನಿಗೂ ಸಾಮ್ಯವಿರುವುದನ್ನು ಜೀವವಿಜ್ಞಾನಿಗಳು ಗುರುತಿಸಿದ್ದಾರೆ. ಮಂಗನಂತೆ ಮನುಷ್ಯನಿಗೆ ಬಾಲವಿಲ್ಲದಿದ್ದರೂ ಮಂಗನ ಅನೇಕ 'ಗುಣ'ಗಳನ್ನು ಹೊಂದಿರುವುದಂತೂ ನಿಜ. ಸಂಭಾಷಣೆಯ ಸಂದರ್ಭಗಳಲ್ಲಿ ಅನೇಕರು 'ಮಂಗ್ಯಾ' ಎಂದು ಮೂದಲಿಸುವುದನ್ನು ನೀವು ಕೇಳಿರಬಹುದು. ಮನುಷ್ಯನ ಮನಸ್ಸಿನ ಚಂಚಲತೆಯನ್ನು ಬಸವಣ್ಣನವರು ಕೋತಿಯ ವರ್ತನೆಗೆ ಹೋಲಿಸುತ್ತಾರೆ. ಮರದ ಮೇಲಿರುವ ಮಂಗ ಒಂದು ಕೊಂಬೆಯ ಮೇಲೆ ನಿಲ್ಲುವುದಿಲ್ಲ. ಕೊಂಬೆಯಿಂದ ಕೊಂಬೆಗೆ, ಮರದಿಂದ ಮರಕ್ಕೆ ಹಾರುತ್ತಿರುತ್ತದೆ. ಹಾಗೆಯೇ ಮನುಷ್ಯನ ಮನಸ್ಸೂ ಸಹ ಒಂದೆಡೆ ಸ್ಥಿರವಾಗಿ ನಿಲ್ಲುವುದಿಲ್ಲ. ಹಲವು ವಿಷಯಗಳತ್ತ ಹರಿದಾಡುತ್ತಿರುತ್ತದೆ ಎನ್ನುವ ಅವರ ವಚನ ತುಂಬಾ ಅರ್ಥಪೂರ್ಣವಾಗಿದೆ:

**ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು**
**ನಿಂದಲ್ಲಿ ನಿಲ್ಲಲೀಯದೆನ್ನ ಮನವು**
**ಹೊಂದಿದಲ್ಲಿ ಹೊಂದಲೀಯದೆನ್ನ ಮನವು**
**ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ**
**ಭ್ರಮರನಾಗಿರಿಸು ನಿಮ್ಮ ಧರ್ಮ!**

ಮನುಷ್ಯನ ಮನಸ್ಸಿನ ಈ ಮರ್ಕಟತನವನ್ನು ನಿವಾರಿಸಿಕೊಳಬೇಕೆನ್ನುವುದೇ ಜಗತ್ತಿನ ಎಲ್ಲ ಧರ್ಮಗಳ ಬೋಧೆ. ಕಣ್ಣು, ಕಿವಿ ಮತ್ತು ಬಾಯನ್ನು ಕೈಗಳಿಂದ ಮುಚ್ಚಿಕೊಂಡಿರುವ ಮೂರು ಜಾಣ ಕೋತಿಗಳ ವಿಗ್ರಹಗಳನ್ನು ಗಾಂಧೀಜಿ ಸದಾ ಇಟ್ಟುಕೊಂಡಿದ್ದರೆಂದು ಹೇಳುತ್ತಾರೆ. ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ, ಕೆಟ್ಟದನ್ನು ಹೇಳಬೇಡ ಎನ್ನುವುದು ಆ ಜಾಣ ಕೋತಿಗಳ ಸಂದೇಶ. ಕೆಟ್ಟದ್ದನ್ನು ಮಾಡಬೇಡ ಎಂದು ಸೂಚಿಸಲು ಕೈಗಳನ್ನು ಎದೆಯ ಮೇಲೆ ಅಡ್ಡಲಾಗಿ ಇಟ್ಟುಕೊಂಡಿರುವ ನಾಲ್ಕನೆಯ ಕೋತಿಯ ವಿಚಾರವಾಗಿಯೂ ಕೇಳಿಬರುತ್ತದೆ.

ಟೋಪಿ ಮುಖ್ಯವಾಗಿ ತಲೆಯನ್ನು ಬಿಸಿಲಿನಿಂದ ಕಾಯುವ ತಲೆಯುಡುಪು. ಟೋಪಿ ಹಾಕಿಕೊಳುವುದು ತಪ್ಪಲ್ಲ. ಆದರೆ ಕಾಲಾನಂತರದಲ್ಲಿ ಇದಕ್ಕೆ ಹೀನಾರ್ಥ ಒದಗಿ ಬಂದಿದೆ. 'ಟೋಪಿ ಹಾಕುವುದು, ಟೋಪಿ ಹಾಕಿಸಿಕೊಳುವುದು' ಎಂಬ ಶಬ್ದಗಳ ಬಳಕೆಯಲ್ಲಿ ಮೋಸ, ವಂಚನೆ ಎಂಬ ಹೀನಾರ್ಥ ಅಡಗಿರುವುದನ್ನು ವಿವರಿಸಬೇಕಾಗಿಲ್ಲ! ಟೋಪಿ ಹಾಕುವ ಕಲೆ ಮನುಷ್ಯರಿಗೆ ಕರಗತವಾಗಿದ್ದಂತೆ ದೇವಾನುದೇವತೆಗಳಿಗೂ ಕರಗತವಾಗಿತ್ತು ಎಂಬುದು ಪುರಾಣಗಳಿಂದ ತಿಳಿಯುತ್ತದೆ. ಮಾಸ್ಟರ್ ಹಿರಣ್ಣಯ್ಯನವರ 'ಮಕ್ಮಲ್ ಟೋಪಿ' ನಾಟಕ ನೀವು ನೋಡಿಯೇ ಇರುತ್ತೀರಿ. ಈಗೀಗ ರಾಜಕೀಯದಲ್ಲಿ ಯಾರು ಚೆನ್ನಾಗಿ ಟೋಪಿ ಹಾಕಬಲ್ಲರೋ ಅವರು ಮಾತ್ರ ಸಿಂಹಾಸನದಲ್ಲಿ ಉಳಿಯಲು ಸಾಧ್ಯ ಎಂಬುದು ಆಬಾಲವೃದ್ಧರಿಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ.

ಇಪ್ಪತ್ತೈದು ವರ್ಷಗಳ ಹಿಂದೆ ಹರಿಹರದ ಒಂದು ಅಂಗಡಿ ಮಳಿಗೆ ಮುಂದೆ ಒಂದು ಬೋರ್ಡ್ ನೇತಾಡಿತು. ಅದು ಉತ್ತರ ಭಾರತದ ಒಂದು ವ್ಯಾಪಾರಿ ಸಂಘಟನೆಯ ಶಾಖೆ ಎಂದು ಬರೆಯಲಾಗಿತ್ತು. ಅಲ್ಲಿ ಮಾಡಬೇಕಾದ

ವ್ಯವಹಾರ ತುಂಬಾ ಸರಳ ಅಷ್ಟೇ ಲಾಭದಾಯಕ ಎಂದು ಬೀದಿ ಬೀದಿಗಳಲ್ಲಿ ಪ್ರಚಾರ ಮಾಡಲಾಯಿತು. ಈ ದಿನ ಕಟ್ಟಿದ ಹಣದ ಐದುಪಟ್ಟು ಮೌಲ್ಯದ ವಸ್ತುಗಳನ್ನು ಮೂರು ತಿಂಗಳ ನಂತರ ಕೊಡುವುದಾಗಿ ಸಂಸ್ಥೆ ಸಾರಿತು. ಅದನ್ನು ನಂಬಿದವರು ಕೆಲವರು ಮಾತ್ರ. ಅವರು ಹಣವನ್ನೂ ಕಟ್ಟಿದರು, ಅದಕ್ಕಿಂತ ಹೆಚ್ಚಿನ ಮೌಲ್ಯದ ವಸ್ತುಗಳನ್ನೂ ಪಡೆದರು. ಮೂರು ತಿಂಗಳು ಕಳೆದ ನಂತರ ನೂರು ರೂ. ಕಟ್ಟಿದವರು ಹೊಸ ಸೈಕಲ್ ಪಡೆದರು. ಸೈಕಲ್ಲಿಗೆ ಬಲೂನುಗಳನ್ನು ಕಟ್ಟಿಕೊಂಡು ಗತ್ತಿನಿಂದ ಬೆಲ್ ಬಾರಿಸುತ್ತಾ ಬೀದಿ ಬೀದಿ ಸುತ್ತಿದರು. ಇನ್ನೂರು ರೂ. ಕಟ್ಟಿದವರು ಹೊಚ್ಚ ಹೊಸ ಟೀವಿಯನ್ನ ಹೆಗಲಿಗೇರಿಸಿಕೊಂಡು ಮನೆಗೆ ಠೀವಿಯಿಂದ ನಡೆದರು. ಐದು ನೂರು ರೂಪಾಯಿ ಕಟ್ಟಿದವರು ಮೋಪೆಡ್ ಪಡೆದು ಹೆಂಡತಿಯನ್ನು ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡು ಜಾಲಿ ರೈಡ್ ಮಾಡಿ ಸ್ಕೀಮಿಗೆ ಸೇರದವರ ಹೊಟ್ಟೆ ಉರಿಸಿದರು. ಆಗ ಶುರುವಾಯಿತು ಹಣ ಕಟ್ಟಲು ಜನರ ನೂಕು ನುಗ್ಗಲು. ಹಣ ಕಟ್ಟುವವರನ್ನು ನಿಯಂತ್ರಿಸಲು ಪೋಲೀಸರು ಹೆಣಗಾಡಬೇಕಾಯಿತು. ಎರಡು ತಿಂಗಳ ತನಕ ಹಣ ಕಟ್ಟಲು ಭಾರಿ ಭರಾಟೆ ನಡೆಯಿತು. ಆದರೆ ಒಂದು ದಿನ ಬೆಳಗಾಗುತ್ತಿದ್ದಂತೆ ನಾಗರಿಕರಿಗೆ ಒಂದು ಘನಘೋರ ಸುದ್ದಿ ತಿಳಿಯಿತು. ಆ ಸಂಸ್ಥೆಯ ಆಫೀಸು ಬಾಗಿಲು ತೆರೆದಿಲ್ಲ, ರಾತ್ರೋರಾತ್ರಿ ವ್ಯಾಪಾರಿ ಜಾಗ ಖಾಲಿ ಮಾಡಿ ಹೊರಟು ಹೋಗಿದ್ದ. ಜನ ಬಾಗಿಲು ಮುರಿದು ಒಳ ನುಗ್ಗಿ ಅಲ್ಲಿದ್ದ ಕುರ್ಚಿ ಮೇಜು ಮೊದಲಾದುವನ್ನು ಮುರಿದು ಕೈಗೆ ಸಿಕ್ಕಿದ್ದನ್ನು ದೋಚಿದರು. ಕೆಲವು ದಿನ ಜನ ತಾವು ಟೋಪಿ ಹಾಕಿಸಿಕೊಂಡ ಬಗ್ಗೆ ಮಾತನಾಡಿಕೊಂಡು ವರ್ಷವಾಗುವುದರೊಳಗೆ ಆ ವಿಷಯವನ್ನೇ ಮರೆತರು.

ಮರುವರ್ಷ ಅಂಥದೇ ಇನ್ನೊಂದು ಸಂಸ್ಥೆ ಹೊಸ ಬೋರ್ಡಿನೊಂದಿಗೆ ಕಾಣಿಸಿಕೊಂಡಿತು. ಯಥಾಪ್ರಕಾರ ಪ್ರಚಾರ ಮಾಡಿತು. ಈ ಸಾರಿ ಜನ ಬುದ್ಧಿವಂತರಾಗಿದ್ದರು, ಯಾರೂ ಹಣ ಕಟ್ಟಿರಲಾರರು ಎಂದು ನೀವು ಊಹಿಸದರೆ ಅದು ತಪ್ಪು. ಆರಂಭದ ದಿನದಿಂದಲೇ ಜನ ಕ್ಯೂನಿಂತು ನೂಕು ನುಗ್ಗಲಿನಲ್ಲಿ ಹಣ ಕಟ್ಟಿದರು. ಈ ಉತ್ಸಾಹಕ್ಕೆ ಅವರ ತಾರ್ಕಿಕ ಉತ್ತರ ಹೀಗಿತ್ತು: “ಅವರು ಮೋಸ ಮಾಡಿ ಓಡಿ ಹೋಗುವುದೇನೋ ನಿಜ. ಆದರೆ ಆರಂಭದಲ್ಲಿ ಹಣ ಕಟ್ಟಿದವರಿಗೆ ಐದು ಪಟ್ಟು ಹಣದ ವಸ್ತುಗಳನ್ನು ಕೊಟ್ಟೇ ಕೊಡುತ್ತಾರೆ. ಮೋಸ ಮಾಡುವುದೇನಿದ್ದರೂ ತಡವಾಗಿ ಸ್ಕೀಮಿಗೆ ಸೇರಿದವರಿಗೆ ಮಾತ್ರ!” ಹೀಗಾಗಿ ಆ ಹೊಸ ಕಂಪನಿಗೆ ದಾರಿ ತುಂಬಾ ಸಲೀಸಾಯಿತು. ಕೇವಲ ಹದಿನೈದು ದಿನದಲ್ಲಿ ಸಾಕು ಬೇಕಾಗುವಷ್ಟು ಹಣ ಹರಿಹರದ ಪಕ್ಕದಲ್ಲಿಯೇ ಸಾಗುವ ತುಂಗಭದ್ರೆಯ ಪ್ರವಾಹದಂತೆ ಹರಿದು ಬಂದಿತು. ಬಹುಳ ಬಿದಿಗೆ ದಿನ ಆರಂಭವಾದ ವ್ಯಾಪಾರ ಅಮಾವಾಸ್ಯೆ ದಿನಕ್ಕೆ ಮುಕ್ತಾಯಗೊಂಡು ಬಾಗಿಲು ಜಡಿದು ಕಾಲು ಕಿತ್ತಿತು. ಮೊದಲನೆಯ ಸಂಸ್ಥೆಯಷ್ಟು ಶ್ರಮವಾಗಲೀ ಖರ್ಚಾಗಲೀ ಆ ಸಂಸ್ಥೆಗೆ ಆಗಲಿಲ್ಲ. ಜನರು ನಾ ಮುಂದು ತಾ ಮುಂದು ಎಂದು ತಲೆಯೊಡ್ಡಿ ನಾನಾ ಸೈಜಿನ ಟೋಪಿಗಳನ್ನು ಹಾಕಿಸಿಕೊಂಡಿದ್ದರು!

ಮನಿ ಸರ್ಕುಲೇಶನ್ ಎಂಬ ಸ್ಕೀಮಿನ ಬಗ್ಗೆ ನೀವು ಕೇಳಿರುತ್ತೀರಿ. ಈ ಸ್ಕೀಮಿಗೆ ಸೇರಿಕೊಳಲು ನೀವು ಮಾಡಬೇಕಾದುದು ಇಷ್ಟೆ: ಕಂಪನಿಗೆ ನೀವು 1,000 ರೂ ಕಳಿಸಬೇಕು. ಅವರು ಮೂರು ಕೂಪನ್‍ಗಳನ್ನು ನಿಮಗೆ ಕಳಿಸುತ್ತಾರೆ. ಅದನ್ನು ನೀವು ಮೂರು ಜನರಿಗೆ ಮಾರಬೇಕು. ಅವರು ಕಂಪನಿಗೆ ಕಳಿಸುವ ಹಣದಲ್ಲಿ ತಲಾ 300 ರೂ. ಗಳಂತೆ 900 ರೂಗಳನ್ನು ನಿಮಗೆ ಕಳಿಸಲಾಗುವುದು. ಆ ಮೂರು ಜನರು ಸರಣಿಯನ್ನು ಮುಂದುವರಿಸಿದಾಗ ಹೊಸದಾಗಿ ಸೇರಿದ ಒಂಬತ್ತು ಜನರು ಕಳಿಸುವ ಹಣದಲ್ಲಿ ನಿಮಗೆ ತಲಾ 100 ರೂ.ಗಳಂತೆ 900 ರೂ. ಗಳನ್ನು ಕಂಪನಿಯು ಕಳಿಸುತ್ತದೆ. ಆ ಒಂಬತ್ತು ಜನರು ಸರಣಿ ಮುಂದುವರಿಸಿದಾಗ 27 ಜನರು ಕಳಿಸುವ ಹಣದಲ್ಲಿ ನಿಮಗೆ ತಲಾ 50 ರೂ.ಗಳಂತೆ 1350 ರೂ. ಗಳನ್ನು ಕಂಪನಿ ಕಳಿಸುತ್ತದೆ. ಆ ಇಪ್ಪತ್ತೇಳು ಜನರು ಸರಣಿ ಮುಂದುವರಿಸಿದರೆ 71 ಜನರು ಕಳಿಸುವ ಹಣದಲ್ಲಿ ತಲಾ 25 ರೂ.ಗಳಂತೆ .... ಹೀಗೆ ಸರಣಿ ಒಂದು ತಿಂಗಳು ಮುಂದುವರಿದರೆ ನೀವು ಕೋಟ್ಯಧೀಶರಾಗುವುದು ಗ್ಯಾರಂಟಿ. ಆದರೆ ಆ ವೇಳೆಗೆ ಪ್ರಪಂಚದಲ್ಲಿರುವ ಜನಸಂಖ್ಯೆಗಿಂತ ಹೆಚ್ಚು ಸದಸ್ಯರು ಆ ಸ್ಕೀಮಿಗೆ ಸೇರಿರುತ್ತಾರೆ. ಅಂದರೆ ಎಲ್ಲರ ಕೈಗಳಲ್ಲೂ ಟೋಪಿಗಳೇ ಅವುಗಳನ್ನು ಹಾಕಿಸಿಕೊಳಲು ತಲೆಗಳೇ ಇರುವುದಿಲ್ಲ! ಜೈಲು ಕಂಬಿ ಎಣಿಸಿದ ವಿನಿವಿಂಕ್ ಶಾಸ್ತ್ರಿ ಮತ್ತು ಆತನ ಸ್ಕೀಂ ಬಗ್ಗೆ ನೀವು ಕೇಳಿಯೇ ಇರುತ್ತೀರಿ! ಅವನ ‘ಟೋಪಿ’ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ.

ಗಾಂಧಿ ಟೋಪಿ ಬಗ್ಗೆ ನೀವು ಬಲ್ಲಿರಿ. ಸ್ವಾತಂತ್ರ್ಯ ಚಳುವಳಿಗಾರರು ಗಾಂಧಿಟೋಪಿ ಧರಿಸುತ್ತಿದ್ದರು. ಬಿಳಿಯ ಬಣ್ಣದ ಖಾದಿ ಟೋಪಿ ಧರಿಸುವುದು ಸ್ವಾತಂತ್ರ್ಯ ಹೋರಾಟದ ಪ್ರತೀಕವಾಗಿತ್ತು. ಆದರೆ ಇಂದು ತಲೆಯ ಮೇಲೆ ಟೋಪಿ ಇರಲಿ ಬಿಡಲಿ ಟೋಪಿ ಹಾಕುವ ಕಲೆಯಂತೂ ಸರ್ವೇ ಸಾಮಾನ್ಯವಾಗಿದೆ. ಕರ್ನಾಟಕದ ವಿಷಯಕ್ಕೆ ಬಂದರೆ ತುಂಗಭದ್ರಾ ನದಿಯ ದಕ್ಷಿಣದಲ್ಲಿ ಟೋಪಿಗಳು ವಿರಳ. ಭಜನಾತಂಡದವರು ಮಾತ್ರ ಹಾಕಿಕೊಳುತ್ತಾರೆ. ನದಿಯನ್ನು ದಾಟಿ ಉತ್ತರ ಕರ್ನಾಟಕದ ಕಡೆ ಹೋದಂತೆ ಹಳ್ಳಿಯ ರೈತರ ತಲೆಯ ಮೇಲೆ ಟೋಪಿಗಳು ವಿರಾಜಮಾನವಾಗಿರುವ ದೃಶ್ಯ ಕಾಣಿಸುತ್ತದೆ. ಇದು ಸ್ವಾತಂತ್ರ್ಯ ಚಳುವಳಿಯ ಕಾಲದ ಪ್ರಭಾವ ಎಂದರೆ ತಪ್ಪಲ್ಲ. ಟೋಪಿ ತಲೆಗೆ ಒಳ್ಳೆಯದೇ. ಆದರೆ ಅದನ್ನು ನಾವು ಹಾಕಿಕೊಳಬೇಕೇ ಹೊರತು ಬೇರೆಯವರಿಗೆ ಹಾಕುವುದು ತರವಲ್ಲ. ಹಳೇ ಮೈಸೂರು ಪ್ರಾಂತ್ಯದ ಸಭೆಸಮಾರಂಭಗಳಲ್ಲಿ ಸನ್ಮಾನಿತರಿಗೆ ಪೇಟ ಹಾಕುವ ಪದ್ಧತಿ ಇದ್ದರೂ ‘ಟೋಪಿ ಹಾಕುವ ಪದ್ಧತಿ’ ಇಲ್ಲ ಎನ್ನಲಾಗದು!

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಚಳುವಳಿಗಾರರು ಬಿಳಿಟೋಪಿಯನ್ನು ಧರಿಸಿ ಬ್ರಿಟಿಷರ ಬೂಟಿಗೆ-ಲಾಠಿಗೆ-ಗುಂಡಿಗೆ ಬಗ್ಗದೆ ತಮ್ಮ ಪ್ರಾಣವನ್ನು ತೃಣವಾಗಿ ಕಂಡು ಹೋರಾಡಿದರು. ತಮ್ಮ ಗುಂಡಿಗೆಯ ಬಿಸಿನೆತ್ತರನ್ನು ನೆಲಕ್ಕೆ ಬಸಿದರು. ತ್ಯಾಗದ ಸಂಕೇತವಾಗಿದ್ದ ಅಂದಿನ ಆ ಟೋಪಿಗೆ ಇಂದು ಅಂತಹ ಯಾವ ಭಾವನಾತ್ಮಕವೂ ವಿಶಾಲವೂ ಪವಿತ್ರವೂ ಆದ ಅರ್ಥ ಉಳಿದಿಲ್ಲ, ಅದಕ್ಕೆ ಬದಲಾಗಿ ಟೋಪಿ ಎಂದರೆ ಮೋಸ ಎಂಬ ಹೀನಾರ್ಥ ಬಂದಿರುವುದು ವಿಷಾದಕರವೇ ಸರಿ. ಹಾಗೆಯೇ ಇನ್ನೊಂದು ಶಬ್ದ ಗೋವಿಂದ ಎನ್ನುವುದು. ಗೋವಿಂದನ ನಾಮಸ್ಮರಣೆ ಮಾಡುವುದು ಆಸ್ತಿಕ ಭಕ್ತರನ್ನು ಭಕ್ತಿಯ ಪರಾಕಾಷ್ಠೆಗೆ ಒಯ್ಯುತ್ತಿದ್ದ ದಿನಗಳು ಹಿಂದೆ ಇದ್ದವು. ಪುರಂದರ ದಾಸರೂ ಸಹ ‘ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ’ ಎಂದಿದ್ದಾರೆ. (ದೇವರಿಗೆ ಬಂಗಾರದ ನಾಮ ಇರುವುದರಿಂದ ದಾಸರು ಹೀಗೆ ಹಾಡಿರಬಹುದೇ ಎಂದು ಕೆಲವರ ಕುಹಕ!) ಈಗಲೂ ತಿರುಪತಿಯಲ್ಲಿ ಗೋವಿಂದ ನಾಮಸ್ಮರಣೆಯು ಭಕ್ತಿಯ ಸೋಪಾನವಾಗಿರುವುದನ್ನು ಕಾಣಬಹುದು. ದೇವರ ಸಾನ್ನಿಧ್ಯ ಹತ್ತಿರ ಹತ್ತಿರವಾದಂತೆ ದೇವರ ದರ್ಶನಕ್ಕೆಂದು ಉದ್ದುದ್ದ ಕ್ಯೂಗಳಲ್ಲಿ ನಿಂತವರ ಗೋವಿಂದ ನಾಮಸ್ಮರಣೆಯ ಭರಾಟೆ ಹೆಚ್ಚುತ್ತದೆ. ನಾಮಸ್ಮರಣೆಯೊಂದಿಗೆ ಗೋವಿಂದನ ಪದತಲವನ್ನು ತಲುಪಿದ ಹೊತ್ತಿಗೆ ಮೈಮರೆತಿರುತ್ತಾರೆ. ಮುಂದಕ್ಕೆ ಹೋಗುವುದನ್ನೇ ಮರೆತು ಅಲ್ಲಿಯೇ ನಿಂತು ಆರಾಧ್ಯ ದೈವವನ್ನು ಕಂಗಳಲ್ಲಿ ಮನದಣಿಯೆ ತುಂಬಿಕೊಳುತ್ತಾರೆ.

ಅವರನ್ನು ಅಲ್ಲಿಯ ಸೆಕ್ಯುರಿಟಿಯ ಸಿಬ್ಬಂದಿ ರಟ್ಟೆಹಿಡಿದು ಎಳೆದು ಹಾಕದ ಹೊರತು ಮುಂದೆ ಸರಿಯುವುದೇ ಇಲ್ಲ! ಇಂಥ ಗೋವಿಂದ ನಾಮಕ್ಕೆ ಇಂದಿನ ವ್ಯವಹಾರದಲ್ಲಿ ಒದಗಿರುವ ಅರ್ಥವಾದರೂ ಎಂಥದು! "ಆ ಗಂಟುಕಳ್ಳನಿಗೆ ನೀನು ಸಾಲ ಕೊಟ್ಟಿದ್ದೀಯಲ್ಲಾ, ನಿನಗೆ ಬುದ್ಧಿ ಇದೆಯೆ? ನಿನ್ನ ಹಣ ಗೋವಿಂದ! ಆ ಕಳ್ಳ ನಿನಗೆ ಪಂಗನಾಮ ಹಾಕುತ್ತಾನೆ ನೋಡಿಕೊಂಡಿರು!"

ಸಹೃದಯ ಓದುಗರೇ! ಜನರ ಸಂಭಾಷಣೆಗಳಲ್ಲಿ ಇಂತಹ ಮಾತುಗಳು ಕೇಳಿಬರುವಂತಾಗಿರುವುದು ಯಾರಿಂದ, ಏಕೆ? ನಾಗರಿಕ ಸಮಾಜ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕಲ್ಲವೇ?

3.2.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑